**SC265/23**
**PW.2**

**ದಿನಾಂಕಃ 11.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಆರೋಪಿಗಳ ಪರ ವಕೀಲರಿಂದಃ –**

2. ನಾನು 9 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಅಂಗಡಿ ನಂಜನಗೂಡು ಮೈಸೂರು ರಸ್ತೆ ಯ ಆರ್ ಎಂ ಸಿ ಯಾರ್ಡ್ ಪಕ್ಕ ಇದ್ದು, ಅಲ್ಲಿ ನನ್ನ ಅಂಗಡಿ ಬಿಟ್ಟು ಹಲವಾರು ಅಂಗಡಿಗಳು ಇರುತ್ತವೆ ಎಂದರೆ ಸರಿ. ಅಲ್ಲ ಹಲವಾರು ಜನ ಮತ್ತು ವಾಹನಗಳು ಓಡಾಡುತ್ತವೆ ಮತ್ತು ಹಳ್ಳಿಯ ಜನ ಬಂದು ತಾವು ಬೆಳೆದ ಬೆಳೆಯನ್ನು ಮಾರಾಟಕ್ಕೆ ತಂದಿರುತ್ತಾರೆ ಎಂದರೆ ಸರಿ. ಅಲ್ಲಿ ಸಾಲಾಗಿ ಹಲವಾರು ಟೀ ಅಂಗಡಿಗಳು ಸಹ ಇರುತ್ತವೆ ಎಂದರೆ ಸರಿ. ಹಳ್ಳಿಯಿಂದ ಬರುವ ರೈತರು ತಮ್ಮ ಬೆಳಯನ್ನು ಮಾರಾಟ ಮಾಡಲು ಬಂದಾಗ ರಾತ್ರಿ ಅಲ್ಲಿಯೇ ಅಂಗಡಿಗಳ ಮುಂದೆ ಮಲುಗುತ್ತಾರೆ ಎಂದರೆ ಸಾಕ್ಷಿಯೂ ಇರಬಹುದು ನನಗೆ ಅಷ್ಟಾಗಿ ಗೊತ್ತಿಲ್ಲ ಎಂದು ನುಡಿಯತ್ತಾರೆ. ನನ್ನ ಅಂಗಡಿಯಿಂದ ಮಹಿ ಟೀ ಸ್ಟಾಲ್ 100–150 ಅಡಿ ಅಂತರದಲ್ಲಿರುತ್ತದೆ. ಮಹಿ ಟೀ ಸ್ಟಾಲ್ ನಲ್ಲಿ ಸಹ ಟಿ ಕುಡಿಯಲು ಬಂದ ಹಲವಾರು ಜನಗಳು ಯಾವಗಲೂ ಇರುತ್ತಾರೆ ಎಂದರೆ ಸರಿ. ಮಹಿ ಟೀ ಸ್ಟಾಲ್ ರಾತ್ರಿ 01.00 ಗಂಟೆಯವರೆಗೆ ಇರುತ್ತದೆ ಎಂದರೆ ಸಾಕ್ಷಿಯೂ ನನಗೆ ಗೂತ್ತಿಲ್ಲ ಎಂದು ನುಡಿಯತ್ತಾರೆ.

3. ಮಹಜರ್ ಮಾಡುತ್ತೇವೆ ಸಾಕ್ಷಿಯಾಗಬೇಕೆಂದು ಯಾವಾಗ ಹೇಳಿರುತ್ತಾರೆ ಎಂದರೆ ಸಾಕ್ಷಿಯೂ ಬೆಳಿಗ್ಗೆ 08.00–08.30 ರ ಗಂಟೆಗೆ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಮಹಜರಿಗೆ ನೋಟೀಸನ್ನು ನನ್ನ ಅಂಗಡಿಯ ಬಳಿ ಬಂದು ನೀಡಿರುತ್ತಾರೆ. ಸಾಕ್ಷಿಗೆ ನಿಪಿ.5, 6 ರಲ್ಲಿರುವ ಪೋಟೋವನ್ನು ತೋರಿಸಿ ಅದರಲ್ಲಿರುವ ಕಟ್ಟಡವನ್ನು ತೋರಿಸಿ ಸದರಿ ಕಟ್ಟಡದ ಒಳಗಡೆಯಿಂದ ಹಿಂದುಗಡೆಗೆ ಹಾದು ಹೋಗಲು ಸ್ಥಳವಿರುತ್ತದೆ ಎಂದರೆ

ಸಾಕ್ಷಿಯ ಹೌದು ಎಂದು ನುಡಿಯುತ್ತಾರೆ. ಅದಕ್ಕೆ ಯಾವುದೇ ಬಾಗಿಲು ಇರುವುದಿಲ್ಲ ಎಲ್ಲಾ ಕಡೆಯಿಂದ ತೆರೆದಿರುತ್ತದೆ ಎಂದರೆ ಸರಿ. ನೀವು ಸಹಿ ಮಾಡಿದ ದಾಖಲೆಯಲ್ಲಿ ಏನು ಬರೆದಿರುತ್ತದೆ ಎಂದು ತಿಳಿದಿರುತ್ತದೆಯೇ ಎಂದರೆ ಸಾಕ್ಷಿಯೂ ನನಗೆ ಓದಿ ಹೇಳಿರುತ್ತಾರೆ, ಆದರೆ ಓದಲು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಬರವಣಿಗೆಯನ್ನು ಯಾರು ಹೇಳಿದ್ದು , ಯಾರು ಬರೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯೂ ಪೊಲಿಸರೆ ಹೇಳಿ ಬರೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಮಹಜರ್ ನ್ನು ಬೆಳಿಗ್ಗೆ 08.30 ಯಿಂದ ಮದ್ಯಾಹ್ನದವರೆಗೆ ಮಾಡಿರುತ್ತಾರೆ.

4. ನನಗೆ ಸದರಿ ಕೃತ್ಯ ನಡೆಯಿತು ಎಂದು ಹೇಳಲಾದ ಸ್ಥಳದ ಚೆಕ್ಕುಬಂದಿ ಹೇಳಲು ಬರುವುದಿಲ್ಲ. ಕೃತ್ಯ ನಡೆಯಿತು ಎಂದು ಹೇಳಲಾದ ಸ್ಥಳವನ್ನು ಪೋಲೀಸರೆ ತೋರಿಸಿರುತ್ತಾರೆ ಎಂದರೆ ಸಾಕ್ಷಿಯೂ ಹೌದು ಎಂದು ನುಡಿಯುತ್ತಾರೆ. ಸದರಿ ಮಹಜರನ್ನು ನನ ಸಮಕ್ಷಮ ಬರೆದಿರುವುದಿಲ್ಲ, ಆಗಲೇ ಬರೆದಿರುವ ದಾಖಲೆಗೆ ಕೇವಲ ಸಹಿ ಮಾತ್ರ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ರಕ್ತದ ಕಲೆಯಿರುವ ಸಿಮೆಂಟ್ ಇಟ್ಟಿಗೆ ಯನ್ನು ಎಲ್ಲಿಂದ ವಶಪಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯೂ ಪಾಳು ಬಿದ್ದ ಕಟ್ಟಡದಿಂದ ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ರಕ್ತದ ಕಲೆ ಬಿದ್ದ ಸ್ಥಳದಿಂದ ಎಷ್ಟು ಅಂತರದಲ್ಲಿ ಅದನ್ನು ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯೂ ಅಲ್ಲಿಯೇ ಪಕ್ಕದಲ್ಲಿ ಬಿದ್ದಿದನು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಮಹಜರ್ ನಲ್ಲಿ ನಾನು ಎಷ್ಟು ದೂರದಲ್ಲಿ ಬಿದ್ದಿತ್ತು ಎಂದು ಬರೆದಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ.ದೊಣ್ಣೆ ಮತ್ತು ಚಪ್ಪಲಿಗಳು ಎಷ್ಟು ದೂರದಲ್ಲಿ ಬಿದ್ದಿತ್ತು ಎಂದರೆ ಸಾಕ್ಷಿಯೂ ಅಲ್ಲಿಯೇ ಪಕ್ಕದಲ್ಲ ಬಿದ್ದಿತ್ತು ಎಂದು ನುಡಿಯುತ್ತಾರೆ. ಮಹಜರ್ ನಲ್ಲಿ ಅದರ ಬಗೆಗ ಬರೆದಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ. ಮಹಜರ್ ನಲ್ಲಿ ಏನು ಬರೆದಿದೆ ಎಂಬ ವಿಚಾರ ನನಗೆ ತಿಳಿದಿರುವುದಿಲ್ಲ ಎಂದರೆ ಸರಿಯಲ್ಲ. ಪೋಟೋ ಗೆ ನಿಲ್ಲಿಸಿ ಪೋಟೋ ತೆಗೆದಿದ್ದು , ಅದನ್ನು ಹೊರತುಪಡಿಸಿ ನನಗೆ ಬೇರೆ ಯಾವುದೇ ವಿಚಾರ ತಿಳಿದಿರುವುದಿಲ್ಲ ಎಂದರೆ ಸರಿಯಲ್ಲ.

**S.C.No.265/23**
**P.W.-2**
**C.W.-2**

5. ಸಿಸಿ ಟಿವಿ ಪುಟೇಜ್ ನ್ನು ಯಾರನ್ನು ಕೇಳಿ ಯಾರು ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯೂ ಟಿ ಅಂಗಡಿಯಲ್ಲಿ ಇತ್ತು ಅದನ್ನು ಪಡೆದುಕೊಂಡಿರುತ್ತಾರೆ ಆದರೆ ಯಾರು ಯಾರನ್ನು ಕೇಳಿ ಪಡೆದುಕೊಂರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ. ಸಿಸಿ ಟಿವಿಯನ್ನು ನನ್ನ ಸಮಕ್ಷಮ ಪರಿಶೀಲಿಸಿದರು ಎಂದು ಹೇಳಿದ್ದು , ಅದರಲ್ಲಿ ಒಬ್ಬ ವ್ಯಕ್ತಿ ಓಡಾಡುತ್ತಿದ್ದು ಸದರಿ ಚಿತ್ರಣವನ್ನು ಪೊಲೀಸರು ಪೋಟೊ ತೆಗೆದಿರುತ್ತಾರೆ. ಆತ ಕೇವಲ ಬರುತ್ತಿದ್ದು ಕಂಡು ಬಂದಿದ್ದು, ಯಾವ ಕಡೆ ಹೋದನು ಎಂದು ಕಂಡುಬಂದಿಲ್ಲ ಎಂದರೆ ಸರಿ. ಸಿಸಿ ಟಿವಿ ಪುಟೇಜ್ ನ ಡಿವಿಆರ್ ಯಾವ ಕಂಪನಿಯದ್ದು ಎಂದು ನನಗೆ ತಿಳಿದಿರುವುಲ್ಲ. ಅದರ ಬಗ್ಗೆ ಮಹಜರ್ ನಲ್ಲಿ ಬರೆದಿರುತ್ತದೆ ಎಂದರೆ ಸಾಕ್ಷಿಯೂ ನನಗೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ಅದರ ಮಾಹಿತಿಗಳು ನನಗೆ ಅಷ್ಟಾಗಿ ತಿಳಿದಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಸಿಸಿ ಟಿವಿ ಪುಟೇಜ್ ಅಮಾನತ್ತುಪಡಿಸಿಕೊಂಡಿರುವುದಿಲ್ಲ, ನನಗೆ ಅದರ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಡಿವಿಆರ್ ನ್ನು ಪಡೆದುಕೊಂಡು ಏನು ಮಾರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ ಎಂದರೆ ಸರಿ.

6. ನನ್ನ ಸಮಕ್ಷಮ ಮಹಜರ ಜರುಗಿಸಿ ಯಾವುದೇ ಸಿಸಿ ಟಿವಿ ಪುಟೇಜ್ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸ್ಥಳ ತುಂಬಾ ಜನನಿ ಬಿಡ ಸ್ಥಳವಾಗಿರುತ್ತದೆ ಎಂದರೆ ಸರಿ.

**ಮರುವಿಚಾರಣೆಃ ಇಲ್ಲಾ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.